# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **562** |
| **ಸದಸ್ಯರ ಹೆಸರು** | **ಡಾ|| ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | **09-03-2020** |
| **ಉತ್ತರಿಸಬೇಕಾದ ಸಚಿವರು** | **ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ದಲ್ಲಿರುವ ಖಾಸಗಿ ಅನುದಾನ ರಹಿತ ಪ್ರಾಥಮಿಕ/ ಪ್ರೌಢ ಶಿಕ್ಷಣ/ ಪದವಿಪೂರ್ವ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರಗಳನ್ನು ನೀಡುವುದು) | ರಾಜ್ಯದಲ್ಲಿನ ಖಾಸಗಿ ಅನುದಾನರಹಿತ ಶಾಲೆಗಳ ಸಂಖ್ಯೆ<br>**ಪ್ರಾಥಮಿಕ**: 14644; **ಪ್ರೌಢ**: 7265; **ಪದವಿಪೂರ್ವ**: 3273<br>[ಜಿಲ್ಲಾವಾರು ಪಟ್ಟಿ ಅನುಬಂಧ- 1 ರಲ್ಲಿರಿಸಿದೆ.] |
| ಆ) | ಈ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರಗಳನ್ನು ನೀಡುವುದು) | ರಾಜ್ಯದಲ್ಲಿನ ಖಾಸಗಿ ಅನುದಾನರಹಿತ ಶಾಲೆಗಳಲ್ಲಿನ ಸಿಬ್ಬಂದಿಗಳ ಸಂಖ್ಯೆ<br>**ಪ್ರಾಥಮಿಕ**: 88670; **ಪ್ರೌಢ**: 34119; **ಪದವಿಪೂರ್ವ**: 25637<br>[ಜಿಲ್ಲಾವಾರು ಪಟ್ಟಿ ಅನುಬಂಧ- 2 ರಲ್ಲಿರಿಸಿದೆ] |
| ಇ) | ಇಡೀ ಶಿಕ್ಷಣ ಇಲಾಖೆಯ ಸಿಬ್ಬಂದಿಯ ಶೇಕಡವಾರು ಪ್ರಮಾಣ ಎಷ್ಟು; | (see table below) |

| | **ಸರ್ಕಾರಿ ಸಿಬ್ಬಂದಿ** | **ಅನುದಾನಿತ ಸಿಬ್ಬಂದಿ** | **ಅನುದಾನ ರಹಿತ ಸಿಬ್ಬಂದಿ** | **ಒಟ್ಟು ಸಿಬ್ಬಂದಿ** | **ಖಾಸಗೀ ಸಿಬ್ಬಂದಿ ಪ್ರಮಾಣ(%)** | **ಸರ್ಕಾರಿ ಸಿಬ್ಬಂದಿ ಪ್ರಮಾಣ(%)** |
|---|---|---|---|---|---|---|
| **ಪ್ರಾಥಮಿಕ** | 1,60,663 | 10,884 | 88,670 | 2,60,217 | 34.08 | 65.92 |
| **ಪ್ರೌಢ** | 35,997 | 13,927 | 34,119 | 84,043 | 40.60 | 59.40 |
| **ಪಿಯುಸಿ** | 10941 | 9644 | 25637 | 46222 | 88.14 | 11.85 |

| | | |
|---|---|---|
| ಈ) | ಈ ಸಿಬ್ಬಂದಿಗೆ ಮಾನವೀಯ ದೃಷ್ಟಿಯಿಂದ ಉಚಿತವಾಗಿ ಹೆಲ್ತ್ ಕಾರ್ಡ್‌ನ್ನು ನೀಡಲು ಸರ್ಕಾರ ಯೋಚಿಸಿದೆಯೇ; | ಅನುದಾನಿತ ಶಾಲಾ ಕಾಲೇಜುಗಳ ನೌಕರರು ಕರ್ನಾಟಕ ಶಿಕ್ಷಣ ಅಧಿನಿಯಮ-1983 ಮತ್ತು ಅದರಡಿ ರಚಿಸಲ್ಪಟ್ಟ ಕರ್ನಾಟಕ ಶಿಕ್ಷಣ ಸಂಸ್ಥೆಗಳ (Classification, Regulation and Prescrition of curricula) ನಿಯಮಗಳು, 1995ರ ವ್ಯಾಪ್ತಿಗೆ ಒಳಪಡುತ್ತಾರೆ. ಇವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲಾಗುವುದಿಲ್ಲ.<br><br>ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು-1963ರ ವ್ಯಾಪ್ತಿಗೆ ಒಳಪಡುವುದಿಲ್ಲ. ಆದುದರಿಂದ ಇವರು ಹೆಲ್ತ್ ಕಾರ್ಡ್ ಸೌಲಭ್ಯಕ್ಕಾಗಿ ಅರ್ಹರಿರುವುದಿಲ್ಲ ಹಾಗೂ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತು ಹಾಗೂ ನಿಬಂಧನೆಗಳು) ನಿಯಮಗಳು -1999ರ ಅನುಬಂಧ ii (3) ರನ್ವಯ ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯಕ್ಕೂ ಅರ್ಹರಿರುವುದಿಲ್ಲ. |
| ಉ) | ಹಾಗಿದ್ದರೆ, ಈ ಶೈಕ್ಷಣಿಕ ವರ್ಷದಿಂದಲೇ ಈ ಯೋಜನೆಯನ್ನು ಜಾರಿಗೆ ತರಲಾಗುವುದೇ? | ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ. |

**ಇಡಿ 34 ಪಿಜಿಸಿ 2020**

[ಎಸ್.ಸುರೇಶ್ ಕುಮಾರ್]
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು**